ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಬೋಫೋರ್ಸ್ ಹಗರಣ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 17/5/2019

# ಬೋಫೋರ್ಸ್ ಲಂಚ ಕೇಸ್ ತನಿಖೆ ಸ್ಥಗಿತವಿಲ್ಲ

## ದೆಹಲಿ ಕೋರ್ಟಿಂದ ಅರ್ಜಿ ವಾಪಸ್ ಪಡೆದದ್ದಕ್ಕೆ ಸಿಬಿಐ ಸ್ಪಷ್ಟನೆ | ಕೋರ್ಟ್ ಅನುಮತಿ ಬೇಡ ಎಂದಿದ್ದಕ್ಕೆ ಅರ್ಜಿ ಹಿಂದಕ್ಕೆ

ಕ.ಪ್ರ 17/5/19

ನವದೆಹಲಿ: ಬೋಫೋರ್ಸ್ ಫಿರಂಗಿ ಖರೀದಿ ಲಂಚ ಹಗರಣ ಕುರಿತು ಮತ್ತಷ್ಟು ತನಿಖೆ ನಡೆಸಲು ಅನುಮತಿ ನೀಡಬೇಕು ಎಂದು ಕೋರಿ ಒಂದೂವರೆ ವರ್ಷದ ಹಿಂದೆ ದೆಹಲಿಯ ವಿಚಾರಣಾ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಸಿಬಿಐ ಗುರುವಾರ ಹಿಂಪಡೆದಿದೆ. ಆದರೆ ಇದರ ಹೊರತಾಗಿಯೂ ಲಂಚ ಪ್ರಕರಣದ ತನಿಖೆ ಸ್ಥಗಿತಗೊಳಿಸುವುದಿಲ್ಲ ಎಂದು ಸಿಬಿಐ ಸ್ಪಷ್ಟಪಡಿಸಿದೆ.

ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಹೊಸದಾಗಿ ದಾಖಲೆ ಹಾಗೂ ಸಾಕ್ಷ್ಯಗಳು ಲಭಿಸಿವೆ. ಹೀಗಾಗಿ ಈ ಪ್ರಕರಣದಲ್ಲಿ ಮತ್ತಷ್ಟು ತನಿಖೆ ನಡೆಸಬೇಕಾಗಿದೆ ಎಂದು 2018ರ ಫೆ.1ರಂದು ದೆಹಲಿಯ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಿಬಿಐ ಅರ್ಜಿ ಸಲ್ಲಿಕೆ ಮಾಡಿತ್ತು. ಈ ಕುರಿತು ಮೇ 8ರಂದು ವಿಚಾರಣೆ ನಡೆಸುವ ವೇಳೆ, ಪ್ರಕರಣದಲ್ಲಿ ಮುಂದಿನ ವಿಚಾರಣೆ ನಡೆಸಲು ಸಿಬಿಐ ಬಯಸಿದ್ದೇ ಆದಲ್ಲಿ ಈ ಕುರಿತು ಮುಂದುವರೆಯಲು ಅದಕ್ಕೆ ಎಲ್ಲಾ ಹಕ್ಕು ಇದೆ. ಹೀಗಿರುವಾಗ ನಮ್ಮ ಬಳಿ ಏಕೆ ಅರ್ಜಿ ಸಲ್ಲಿಸಿದ್ದೀರಿ ಎಂದು ಪ್ರಶ್ನಿಸಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ಅರ್ಜಿಯನ್ನು ಹಿಂದಕ್ಕೆಪಡೆಯುತ್ತಿರುವುದಾಗಿ ಸಿಬಿಐ ಹೇಳಿದೆ.

**ಏನಿದು ಹಗರಣ?:** 400 ಹೌವಿಟ್ಜರ್ ಗನ್‌ಗಳನ್ನು ಭಾರತೀಯ ಸೇನೆಗೆ ಖರೀದಿ ಮಾಡುವ ಸಂಬಂಧ 1986ರ ಮಾ.24ರಂದು ಭಾರತ ಹಾಗೂ ಸ್ವೀಡನ್‌ನ ಬೋಫೋರ್ಸ್ ಶಸ್ತ್ರಾಸ್ತ್ರ ಕಂಪನಿ ನಡುವೆ 1437 ಕೋಟಿ ರು. ಮೊತ್ತದ ಒಪ್ಪಂದವೇರ್ಪಟ್ಟಿತ್ತು. ಈ ಡೀಲ್‌ನಲ್ಲಿ ಭಾರತದ ಉನ್ನತ ರಾಜಕಾರಣಿಗಳು ಹಾಗೂ ರಕ್ಷಣಾ ಸಿಬ್ಬಂದಿಗೆ ಲಂಚ ಸಂದಾಯವಾಗಿದೆ ಎಂದು 1987ರ ಏ.16ರಂದು ಸ್ವೀಡನ್‌ನ ರೇಡಿಯೊವೊಂದು ವರದಿ ಮಾಡಿತ್ತು. ಪ್ರಕರಣ ಸಂಬಂಧ 1990ರಲ್ಲಿ ಸಿಬಿಐ ಪ್ರಕರಣ ದಾಖಲು ಮಾಡಿಕೊಂಡಿತ್ತು. 2004ರ ಫೆ.4ರಂದು ರಾಜೀವ್ ಗಾಂಧಿ ಅವರನ್ನು ದೆಹಲಿ ನ್ಯಾಯಾಲಯ ಖುಲಾಸೆಗೊಳಿಸಿತ್ತು. 2005ರಲ್ಲಿ ಬೊಫೋರ್ಸ್ ಹಗರಣ ಸಂಬಂಧ ಸಿಬಿಐ ದಾಖಲಿಸಿದ್ದ ಪ್ರಕರಣವನ್ನೇ ದೆಹಲಿ ನ್ಯಾಯಾಲಯ ವಜಾಗೊಳಿಸಿತ್ತು. ಆಗ ಸಿಬಿಐ ಮೇಲ್ಮನವಿ ಸಲ್ಲಿಕೆ ಮಾಡಿರಲಿಲ್ಲ. ಈ ನಡುವೆ ಕೇಂದ್ರದಲ್ಲಿ ಸರ್ಕಾರ ಬದಲಾಗುತ್ತಿದ್ದಂತೆ, 2018ರ ಫೆ.2ರಂದು ಸುಪ್ರೀಂಕೋರ್ಟ್ ಕದ ಬಡಿದಿದ್ದ ಸಿಬಿಐ, 13 ವರ್ಷಗಳ ವಿಳಂಬವನ್ನು ಮನ್ನಿಸಿ ಮೇಲ್ಮನವಿ ಸಲ್ಲಿಸಲು ಅವಕಾಶ ಕೇಳಿತ್ತು.